# ಡಿ.ವಿ.ಜಿ. ಅವರ ಚಿಂತನಾ ಸಾಹಿತ್ಯ: ಸಾಮಾನ್ಯ ವ್ಯಕ್ತಿ

**ಬಸವರಾಜ ಜಿ.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

DOI: https://doi.org/10.5281/zenodo.17221525

## ABSTRACT:

ಸಾಮಾನ್ಯರಲ್ಲಿ ಅಸಾಮಾನ್ಯರ ಹೆಜ್ಜೆಯ ಗುರುತುಗಳ ಕುರಿತು ಚಿಂತಿಸುವುದು ಒಂದು ಅಸಾಮಾನ್ಯ ಕ್ರಿಯೆ ಆಗಿದೆ. ಸಮಾಜದಲ್ಲಿ ಎಲೆಮರೆ ಕಾಯಿಯಂತೆ ಬಾಳಿ ಬೆಳಗಿದ ವ್ಯಕ್ತಿಗಳ ಮೌಲ್ಯಯುತವಾದ ಬಾಳ್ವೆಗೆ ಕನ್ನಡಿ ಹಿಡಿದು ಚಿಂತನೆ ನಡೆಸಲಾಗಿದೆ. ಡಿ.ವಿ.ಜಿ. ಅವರು ತಮ್ಮ ಬದುಕಿನ ಅನುಭವಗಳನ್ನು ಸಾಮಾನ್ಯ ವ್ಯಕ್ತಿಗಳಲ್ಲಿ ವಿಸ್ತರಿಸುವ ಹಾಗೂ ಬದುಕಿದ ನೆಲೆಗಳನ್ನು ತಮ್ಮ ವೈಚಾರಿಕ ದೃಷ್ಟಿಕೋನದಲ್ಲಿ ಚಿಂತಿಸಿದವರು. ತಮ್ಮ 'ಜ್ಞಾಪಕ ಚಿತ್ರಶಾಲೆ' ಎಂಬ ಶೀರ್ಷಿಕೆಯಲ್ಲಿ ಹಲವು ವ್ಯಕ್ತಿಗಳ ಕುರಿತು ಅವರ ಜೀವನದ ವಿವಿಧ ಮಗ್ಗಲುಗಳನ್ನು ಪರಿಚಯಿಸುತ್ತಾರೆ. ಅಲ್ಲಿರುವ ವೈಚಾರಿಕ ನಿಲುವುಗಳನ್ನು ತಮ್ಮ ಚಿಂತನೆಯ ಮೂಲಕ ಸಹೃದಯರಿಗೆ ಮುಟ್ಟಿಸುವ ಸೃಜನಶೀಲತೆಯನ್ನು ಈ ಕೃತಿಯಲ್ಲಿ ಕಾಣಬಹುದು. ಅಂತಹ ವ್ಯಕ್ತಿಗಳಲ್ಲಿ ಬಹುಮುಖ್ಯರಾದವರೆಂದರೆ ಬಂಡಿ ರಸೂಲ್ ಖಾನ್, ಪಿಚ್ಚೆಮೊದಲಿಯಾರ್, ಬೆಂಗಳೂರು ನಾಗರತ್ನಮ್ಮ, ಡಾ. ಗುಂಡಣ್ಣ ಮುಂತಾದವರ ಕುರಿತ ವಿಚಾರಧಾರೆಗಳು.

## KEYWORDS:

ಚಿಂತನ ಸಾಹಿತ್ಯ, ಸಾಮಾನ್ಯ ವ್ಯಕ್ತಿ, ಜ್ಞಾಪಕ ಚಿತ್ರಶಾಲೆ, ವಿಚಾರಧಾರೆ, ಕನ್ನಡ ಸಾಹಿತ್ಯ.

## ಪ್ರಸ್ತಾವನೆ:

ಡಿ.ವಿ.ಜಿ. ಅವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯನ್ನು 8 ಸಂಪುಟಗಳಾಗಿ ಹೊರತಂದಿದ್ದಾರೆ. ಅವುಗಳ ವಿವರಗಳು ಹೀಗಿವೆ: 1. ಸಾಹಿತಿ, ಸಜ್ಜನ, ಸಾರ್ವಜನಿಕರು (1969), 2. ಕಲೋಪಾಸಕರು (1970), 3. ಸಾಹಿತ್ಯೋಪಾಸಕರು (1970), 4. ಮೈಸೂರಿನ ದಿವಾನರುಗಳು (1971), 5. ವೈದಿಕಧರ್ಮ ಸಂಪ್ರದಾಯಸ್ಥರು (1972), 6. ಹಲವರು ಸಾರ್ವಜನಿಕರು (1973), 7. ಹೃದಯ ಸಂಪನ್ನರು (1974), 8. ಸಂಕೀರ್ಣ ಸ್ಮೃತಿಸಂಪುಟ (1977). ಡಿ.ವಿ.ಜಿ. ಅವರೇ ಹೇಳಿದ ಈ ಉದ್ದೇಶಗಳು 'ಜ್ಞಾಪಕ ಚಿತ್ರಶಾಲೆ'ಯ ಎಂಟು ಸಂಪುಟಗಳಲ್ಲಿ ಸಾರ್ಥಕವಾಗಿವೆ. ಈ ಮಾಲೆಯ ಮೊದಲನೆಯ ಸಂಪುಟವು 1969ರಲ್ಲಿ ಪ್ರಕಟವಾದರೂ 1953ರಲ್ಲಿ ಈ ಸಂಪುಟದ

ಬಹುಭಾಗ 'ಜನಪ್ರಗತಿ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಕೊನೆಯ ಸಂಪುಟ 'ಸಂಕೀರ್ಣ ಸ್ಮೃತಿ ಸಂಪುಟ' 1977ರಲ್ಲಿ ಡಿ.ವಿ.ಜಿ. ಅವರ ನಿಧನಾನಂತರ ಹೊರಬಂದಿತು. ಇವುಗಳನ್ನು ಇಟ್ಟುಕೊಂಡು ಪ್ರಮುಖವಾದ ಸಾಮಾನ್ಯ ವ್ಯಕ್ತಿಚಿತ್ರಗಳನ್ನು ಚರ್ಚಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಸುಮಾರು ಎರಡು ಸಾವಿರ ಪುಟಗಳ ಬರಹ, ಕನ್ನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ; ಮಾತ್ರವಲ್ಲ, ಇತಿಹಾಸದ ವಿದ್ಯಾರ್ಥಿಗಳು, ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾದ ಕೊಡುಗೆ. ಮೊದಲನೆಯ ಸಂಪುಟಕ್ಕೆ ಬರೆದ ಉಪೋದ್ಘಾತದಲ್ಲಿ ಡಿ.ವಿ.ಜಿ.ಯವರು, ‘‘ನಮ್ಮಲ್ಲಿ ಚಾರಿತ್ರಿಕ ಸಾಮಗ್ರಿಯನ್ನು ಕಾಪಾಡಿಡುವ ಪದ್ಧತಿ ವಿರಳವಾಗಿದೆ. ಬಹು ಪ್ರಖ್ಯಾತರಾಗಿ ಲೋಕಮಾನ್ಯರಾಗಿರುವ ಅನೇಕ ಮಂದಿ ಮಹನೀಯರ ಜೀವನಕ್ಕೆ ಸಂಬಂಧಪಟ್ಟ ಜ್ಞಾಪಕಗಳನ್ನೂ ದಾಖಲೆಗಳನ್ನೂ ಆ ಮಹನೀಯರು ಸಂಗ್ರಹಿಸಿಡುವ ಗೋಜಿಗೆ ಹೋಗುವುದಿಲ್ಲ’’ ಎಂದು ವಿಷಾದಿಸಿ,[1] ‘‘ಈ ಪ್ರಬಂಧಗಳು ಚರಿತ್ರೆಯಲ್ಲ, ಇವು ಆಯಾ ಮಹನೀಯರ ಮುಖಗಳ ಪಾರ್ಶ್ವರೇಖೆಗಳು. ಇವು ಜೀವನಚರಿತ್ರಕಾರನಿಗೂ, ದೇಶಚರಿತ್ರಕಾರನಿಗೂ ಅಷ್ಟಿಷ್ಟು ಉಪಯುಕ್ತವಾಗಬಹುದಾದ ಕಚ್ಚಾ ಸಾಮಗ್ರಿ’’ ಎಂದಿದ್ದಾರೆ.[2] ಡಿ.ವಿ.ಜಿ. ಯವರು ಈ ಬರಹಗಳನ್ನು ಕಚ್ಚಾಸಾಮಗ್ರಿ ಎಂದು ಕರೆದಿದ್ದರೂ, ಇವು ನಮ್ಮ ಗದ್ಯಸಾಹಿತ್ಯದಲ್ಲಿ ಬಹು ಎತ್ತರದ ಸ್ಥಾನವನ್ನೇ ಪಡೆಯುತ್ತವೆ. ಕಾರಣ ಈ ಸಾಮಗ್ರಿಯನ್ನು ನಮ್ಮ ಮುಂದಿಡುವ ವ್ಯಕ್ತಿತ್ವ, ಮನಸ್ಸು. ಇಂಗ್ಲಿಷಿನಲ್ಲಿ ಒಂದು ಮಾತಿದೆ: 'Life seen through a temperament'. ಈ 'temperament' (ಮನೋಧರ್ಮ/ಸ್ವಭಾವ) ಸೂಕ್ಷ್ಮವಾಗಿರಬೇಕು, ಪಕ್ವವಾಗಿರಬೇಕು, ಚಿಂತನಶೀಲವಾಗಿರಬೇಕು, ಭಾಷೆಯ ಹದವನ್ನು ತಿಳಿದು ಬಳಸುವಂತಿರಬೇಕು. ಡಿ. ವಿ.ಜಿ. ಅವರ ಅರವತ್ತಾರನೆಯ ವಯಸ್ಸಿನಲ್ಲಿ ಪ್ರಾರಂಭವಾದ ಈ ಬರಹ ಸಾಹಿತ್ಯವಾಗದೇ ಇರಲು ಹೇಗೆ ಸಾಧ್ಯ?

'ಜ್ಞಾಪಕ ಚಿತ್ರಶಾಲೆ'ಯ ಈ ಎಂಟು ಸಂಪುಟಗಳಲ್ಲಿ ಸುಮಾರು ಹತ್ತೊಂಬತ್ತನೆಯ ಶತಮಾನದ ಮಧ್ಯದಿಂದ ಒಂದು ನೂರು ವರ್ಷಗಳ ಕಾಲದ ಹಿಂದಿನ ಮೈಸೂರು ರಾಜ್ಯದ, ಮುಖ್ಯವಾಗಿ ಬೆಂಗಳೂರಿನ, ಚರಿತ್ರೆ ಲಭ್ಯವಾಗುತ್ತದೆ. ಇದು ಸಾಮಾನ್ಯವಾಗಿ ನಾವು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಓದುವಂತಹ ಚರಿತ್ರೆಯಲ್ಲ. ರಾಜಕೀಯ ಆಗುಹೋಗುಗಳ ಕಥೆಯಲ್ಲ, ರಾಜಕೀಯವಾಗಿ ಪ್ರಮುಖರಾದವರ ಏಳುಬೀಳುಗಳ ಕಥೆಯಲ್ಲ. ಇದು ಈ ಭಾಗದ ಜನತೆಯ ಕಥೆ, ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ, ಈ ಜನತೆಯ ಚಿಂತನೆಯನ್ನೂ ಜೀವನರೀತಿಯನ್ನೂ ನಡೆಸಿದ ಸತ್ಯದ ದರ್ಶನ, ಮೌಲ್ಯಗಳ ದರ್ಶನ.

ಒಬ್ಬ ಷೇಕ್ಸ್‌ಪಿಯರ್, ಒಬ್ಬ ಬನ್ಯನ್ ಇಂತಹವರ ಪ್ರತಿಭೆಗೆ ನೀರೆರೆದು ಬೆಳೆಸಬಲ್ಲಂತಹ ಸಂಸ್ಕೃತಿ ಜನರಲ್ಲಿರುವುದು ಸಾಧ್ಯ. ಇಂತಹ ಒಂದು ಗುಪ್ತ ಜೀವನದಿ ಈ ಎಂಟು ಸಂಪುಟಗಳಲ್ಲಿ ಪ್ರಕಟವಾಗುತ್ತದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯ ಸಂಪುಟದಲ್ಲಿ ಶಿವಪಿಚ್ಚೆ ಮೊದಲಿಯಾರ್ ಎಂಬಾತನ ಚಿತ್ರವಿದೆ. ಇವರು ಗಾರೆಯ ಕೆಲಸ ಮಾಡುವವರು. ಅವರ ಕಾರ್ಯಮರ್ಮಜ್ಞತೆ, ಸರ್ವಾರ್ಪಣ ಬುದ್ಧಿ ಮೊದಲಾದವನ್ನು ಡಿ.ವಿ.ಜಿ. ಸ್ಪಷ್ಟವಾಗಿ ಚಿತ್ರಿಸುತ್ತಾರೆ. ಕಣ್ಣಳತೆಯಿಂದಲೇ ಕೆಲಸ ಎಲ್ಲಿ ಸರಿಯಾಗಿ ನಡೆದಿದೆ, ಎಲ್ಲಿ ಮುಕ್ಕಾಗಿದೆ ಎಂದು ತಿಳಿಯಬಲ್ಲ ಮನುಷ್ಯ. ‘‘ಪಿಚ್ಚೆ ಮೊದಲಿಯಾರರ ಬಂಧುಗಳಲ್ಲಿ ಕೆಲವರು ದೊಡ್ಡ ದೊಡ್ಡ ಸರ್ಕಾರೀ ಹುದ್ದೆಗಳಲ್ಲಿದ್ದರು; ಕೆಲವರು ವ್ಯಾಪಾರದಲ್ಲಿ ಹಣ ಮಾಡಿ ಹೆಸರುವಾಸಿಯಾಗಿದ್ದರು. ಆದರೆ ಪಿಚ್ಚೆ ಮೊದಲಿಯಾರರು ಆ ಜನದಲ್ಲಿ ಬೆರೆತುಕೊಂಡಿರಲಿಲ್ಲ. ಅವರ ಹೆಸರನ್ನೆತ್ತುತ್ತಲೇ ಇರಲಿಲ್ಲ.’’[3] ಒಂದು ಕಾಲದಲ್ಲಿ ನೆಮ್ಮದಿಯಾಗಿದ್ದು ಸಂಸಾರಸ್ಥರಾಗಿದ್ದ ಈತ, ಹೆಂಡತಿ ಮಕ್ಕಳು ಹೋದಮೇಲೆ, ದೇಶಸಂಚಾರ ಹೊರಟರು. ಇವರ ಆತ್ಮಗೌರವ, ಕರ್ತವ್ಯನಿಷ್ಠೆ ವಿಶಿಷ್ಟವಾದವು. ಎಲ್ಲಿ ಹೋದರೂ ಕೆಲಸ ಹುಡುಕುವರು, ಎರಡು ಮೂರು ದಿನ ಕೆಲಸ ಮಾಡಿ ಮೂರು ನಾಲ್ಕು ರೂಪಾಯಿ ಮಿಗಿಸಿಕೊಂಡು ಮುಂದಕ್ಕೆ ಹೊರಡುವರು. ಡಿ.ವಿ.ಜಿ. ಹೇಳುತ್ತಾರೆ: ‘‘ಕೆಲಸಕ್ಕೆ ಬರುವ ವೇಳೆ, ಕೆಲಸ ಮುಗಿಸುವ ವೇಳೆ, ಕೆಲಸ ನಡೆಸುವ ವೇಳೆ ಈ ಮೂರು ಬಾಬುಗಳಲ್ಲಿಯೂ ಅವರು ತುಂಬಾ ಕಟ್ಟುನಿಟ್ಟಿನವರು. ಊರಿನಲ್ಲಿ ಗಡಿಯಾರವೊಂದೂ ಇಲ್ಲದೆ ಇದ್ದರೆ ಪಿಚ್ಚೆ ಮೊದಲಿಯಾರರು ಕೆಲಸ ಹಿಡಿಯುವ ಅಥವಾ ಕೆಲಸ ಬಿಡುವ ಘಳಿಗೆಯಿಂದ ವೇಳೆ ಎಷ್ಟೆಂಬುದನ್ನು ತಿಳಿಯಬಹುದಾಗಿತ್ತು. ಅವರ ಜನ್ಮದೊಳಗಾಗಿ ಅವರನ್ನು 'ಯಾಕೆ ಇಷ್ಟು ಹೊತ್ತಾಗಿ ಬಂದೆ?' ಎಂದಾಗಲಿ 'ಏನು ಇಷ್ಟು ಅವಸರ?' ಎಂದಾಗಲಿ ಯಾರೂ, ಎಂದೂ ಕೇಳಿರಲಿಲ್ಲ.’’[4] ಪಡೆಯುವ ಪ್ರತಿ ಕಾಸಿಗೆ ತಕ್ಕಷ್ಟು ಕೆಲಸ ಮಾಡುವ ಕ್ರಿಯಾಶೀಲ ಆತ್ಮಗೌರವ ಇಲ್ಲಿ ಕಾಣುತ್ತದೆ.

ಡಿ.ವಿ.ಜಿ.ಯವರು ತಮ್ಮ ಬಾಲ್ಯದ ಶಿಕ್ಷಣ ಕುರಿತು ಹೇಳುವಲ್ಲಿ ರಸೂಲ್ ಖಾನ್‌ನ ಶೈಕ್ಷಣಿಕ ಚಿಂತನೆಯನ್ನು ಅವರು ಒಂದು ಮೌಲ್ಯಯುತವಾದ ಜ್ಞಾನ ಪ್ರಸರಣೆಯ ಊರುಗೋಲಿನಂತೆ ನಿಂತಿದ್ದಾರೆ. ಸ್ವತಃ ಡಿ.ವಿ.ಜಿ.ಯವರು ತಮ್ಮ ಬಾಲ್ಯದ ಶಿಕ್ಷಣ, ಇಂಗ್ಲಿಷ್ ಲೋಯರ್ ಸೆಕೆಂಡರಿ ಆದ ಮೇಲೆ ಮುಂದಿನ ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ಕಳುಹಿಸುವ ಸಂದರ್ಭ ದೂರವಾಗಿತ್ತು. ಆದರೆ ಅದನ್ನು ಒಬ್ಬ ಸಾಮಾನ್ಯ ಬಂಡಿ ಒಡೆಯುವ ರಸೂಲ್ ಖಾನ್‌ನು ತೆಗೆದುಕೊಂಡ ನಿರ್ಧಾರ ಬಹುಮೌಲ್ಯಯುತ ಹಾಗೂ ಶಿಕ್ಷಣದ ಚಿಂತಕನಾಗಿ ನಿಲ್ಲುವ ಅವರ ವ್ಯಕ್ತಿತ್ವ ಇಲ್ಲಿ ಬಹುಮುಖ್ಯವಾಗಿ ರಾಷ್ಟ್ರೀಯ ಚಿಂತಕನನ್ನಾಗಿ ಕಾಣಬಹುದಾಗಿದೆ. ಅಂತೆಯೇ ಡಿ.ವಿ. ಜಿ. ಅವರ ಶಿಕ್ಷಣಕ್ಕಾಗಿ ತಾನೇ ಸ್ವತಃ ಮುಖಬಾಗಿಲಿಂದ ಬೆಂಗಳೂರಿಗೆ ತನ್ನ ನಾಡಿನಿಂದ

ರೈಲ್ವೆ ಸ್ಟೇಷನ್‌ಗೆ ಬಿಟ್ಟು, ಕೈಗೆ ಹಣವನ್ನು ಕೊಟ್ಟು ಅವರನ್ನು ವಿದ್ಯಾಭ್ಯಾಸಕ್ಕೆ ಮುನ್ನುಡಿ ಬರೆದವ ಈ ರಸೂಲ್ ಖಾನ್. ಇಲ್ಲಿ ಸ್ವತಃ ಡಿ.ವಿ.ಜಿ.ಯವರು ವಿದ್ಯೆಯ ಮಹಾ ಪಾರಂಗತರಾಗಿ ನೆಲೆಗೊಳ್ಳಲು ಸಾಮಾನ್ಯ ಬಂಡಿಗಾಡಿ ಒಡೆಯುವ ರಸೂಲ್ ಖಾನ್‌ನಂತಹ ವ್ಯಕ್ತಿಗಳ ಕುರಿತು ತಮ್ಮ ವೈಚಾರಿಕ ನೆಲೆಯಲ್ಲಿ ಸ್ವಾರ್ಥತ್ಯಾಗವನ್ನು ಕಂಡುಕೊಂಡಿದ್ದಾರೆ.

ಬೆಂಗಳೂರು ನಾಗರತ್ನಮ್ಮ ಸಂಗೀತ ಕ್ಷೇತ್ರದಲ್ಲಿ ಖ್ಯಾತಿಯನ್ನು ಸಂಪಾದಿಸಿದ ಮಹಿಳೆ. ಇವರನ್ನು ಡಿ.ವಿ.ಜಿ.ಯವರು ಅವರ ವ್ಯಕ್ತಿತ್ವದಲ್ಲಿನ ಸಂಗೀತದ ರಸದೌತಣವನ್ನು ಸಹೃದಯರು ಉಣಬಡಿಸುವ ರೀತಿ ವಿವರಿಸಿ, ತಮ್ಮ ಕೊನೆಗಾಲದ ದಿನಗಳಲ್ಲಿ ತಮ್ಮೆಲ್ಲ ಸಂಪತ್ತನ್ನು ಭಕ್ತಿ ಪರಾಕಾಷ್ಠತೆಗೆ ಒಪ್ಪಿಸಿದ್ದು ಅನನ್ಯತೆಯನ್ನು ವಿವೇಚಿಸಿರುತ್ತಾರೆ. ಬೆಂಗಳೂರು ನಾಗರತ್ನಮ್ಮ, ತಾಯಿ ಆಸೆಯಂತೆ ಮೈಸೂರಿನಲ್ಲಿ ಸಂಗೀತ, ಸಾಹಿತ್ಯವನ್ನು ಅಭ್ಯಸಿಸಿ, ಸಂಸ್ಕೃತದಲ್ಲಿ ಹೆಚ್ಚಿನ ಪಾಂಡಿತ್ಯವುಳ್ಳ ಅಸಾಮಾನ್ಯಳಾಗಿ ಬೆಳೆದ ಇವಳು, ಮೈಸೂರಿಗಿಂತ ಬೆಂಗಳೂರು ವಿದ್ಯಾಭ್ಯಾಸಕ್ಕೆ ಹೆಚ್ಚು ಶ್ರೇಯಸ್ಸು ಎಂದೆನಿಸಿ ಅಲ್ಲಿಯೇ ಸಂಗೀತನರ್ತನಗಳನ್ನು ಅಭ್ಯಾಸ ಮಾಡಿ, ಖ್ಯಾತಿಯನ್ನು ಪಡೆದವಳು. ಇಂತಹ ಜೀವನದ ಏಳುಬೀಳುಗಳನ್ನು ಸವಿದ ರೀತಿನೀತಿಗಳನ್ನು ಡಿ.ವಿ.ಜಿ.ಯವರು ಕಲಾವಂತಿಕೆಯಿಂದ ವಿವೇಚಿಸಿದ ರೀತಿ ಸದಾಶಯವೇ ಆಗಿದೆ. ತಮ್ಮ ನಾಟ್ಯದ ಮೂಲಕ, ಸಂಗೀತದ ನಿನಾದದ ಮೂಲಕ ನಾಗರತ್ನಮ್ಮನವರ ಕೊನೆ ದಿನಗಳಲ್ಲಿ ತಾವು ಕೈಗೊಂಡ ನಿರ್ಧಾರಗಳನ್ನು ಉದಾರ ಮನೋಭಾವದಿಂದ ನೆರವೇರಿಸಿದವರು. ತಮ್ಮ ಕೀರ್ತನ ಗಾಯನದ ಮೂಲಕ ಸಾಹಿತ್ಯ, ಸಂಗೀತ ಕುರಿತಾದ ಮಹತ್ತರ ವಿಚಾರಗಳನ್ನು ಇಲ್ಲಿ ಕಾಣಿಸಿರುವುದು ಅವರ ಸಾಮಾನ್ಯ ವ್ಯಕ್ತಿಗಳಲ್ಲಿನ ವಿಚಾರಗಳು ಲೋಕಕ್ಕೆ ಹೇಗೆ ಹಿತವಾಗಲು ಅವರು ಕಂಡುಕೊಂಡ ದಾರಿ ಕುರಿತು ಚಿಂತನೆಗೈದಿದ್ದಾರೆ.

ಡಿ.ವಿ.ಜಿ. ಅವರು ತಮ್ಮ ವಿಚಾರವನ್ನು ಕಲಾಸಕ್ತರಲ್ಲಿ ಕಾಣುವ ಪರಿ ಮಹತ್ವದ್ದಾಗಿದೆ. ಅಂತಹವರಲ್ಲಿ ರತ್ನಸಾನಿ ಹಾಗೂ ವೆಂಕಟಲಕ್ಷ್ಮಿಸಾನಿ ಕುರಿತು ಅವರಲ್ಲಿ ವೃದ್ಧ ವೇಶ್ಯೆ ತಕ್ಕ ಎಂಬುವರ ಸಾಕುಮಗಳಾದ ರತ್ನಸಾನಿ ನರ್ತನದಲ್ಲಿ ವಿದ್ಯಾಭ್ಯಾಸ ಮಾಡುತ್ತ ಚೆನ್ನಾಗಿ ಕಲಿತಿದ್ದಳು. ಆಗಿನ ಕಾಲದಲ್ಲಿ ಗೆಜ್ಜೆಪೂಜೆಯು ಒಪ್ಪಿತವಾದ ಸಾಮಾಜಿಕ ವ್ಯವಸ್ಥೆಯ ಒಂದು ಭಾಗವಾಗಿದ್ದುದನ್ನು ಇಲ್ಲಿ ವ್ಯಕ್ತವಾಗಿದೆ. ಅಂದಿನ ಸಾಮಾಜಿಕ ವ್ಯವಸ್ಥೆಯ ಅನಿಷ್ಟ ಪದ್ಧತಿಗಳು ಸಂಪ್ರದಾಯದ ಹೆಸರಿನಲ್ಲಿ ಕಲೆಯನ್ನು ಬಳಸಿಕೊಂಡಿರುವುದು ರತ್ನಸಾನಿಯ ವ್ಯಕ್ತಿತ್ವದಲ್ಲಿ ಕಂಡುಬರುತ್ತದೆ.

ವೆಂಕಟಲಕ್ಷ್ಮಿ ಸಾನಿಯು ಕಂಡ ಗಣ್ಯ ನರ್ತಕಿಯರಲ್ಲಿ ಪ್ರಸಿದ್ಧಳು. ಸಂಗೀತ, ಭರತನಾಟ್ಯದಲ್ಲಿ ಅಲ್ಲದೇ ಸಾಹಿತ್ಯದ ಜ್ಞಾನವನ್ನು ಹೊಂದಿದವಳಾಗಿದ್ದಳು. ಕನ್ನಡದಲ್ಲಿ

ಜಾವಳಿಗಳನ್ನು ಹಾಡಿ ಅಭಿನಂದಿಸುತ್ತಿದ್ದಳು. ಮುಖಚೇಷ್ಟೆಯ ಜೊತೆಗೆ ಧ್ವನಿಚೇಷ್ಟೆರಸಪುಷ್ಟಿ ಇತ್ಯಾದಿ ಅಂಶಗಳಲ್ಲಿ ನರ್ತಕಿಯರ ಅಂದಿನ ಜೀವನ ಶೈಲಿ ಹಾಗೂ ಕಲೆಯ ಗೌರವವನ್ನು ಸಮಾಜ ಸ್ವೀಕರಿಸಿದ ಮೌಲ್ಯಗಳನ್ನು ತರ್ಕಿಸುವ ನೆಲೆಯಲ್ಲಿ ಪ್ರಸ್ತುತತೆಯನ್ನು ತೋರ್ಪಡಿಸುತ್ತದೆ.

'ಜ್ಞಾಪಕ ಚಿತ್ರಶಾಲೆ'ಯ ಈ ಎಂಟು ಸಂಪುಟಗಳಲ್ಲಿ ಸುಮಾರು ಹತ್ತೊಂಬತ್ತನೆಯ ಶತಮಾನದ ಮಧ್ಯದಿಂದ ಒಂದು ನೂರು ವರ್ಷಗಳ ಕಾಲದ ಹಿಂದಿನ ಮೈಸೂರು ರಾಜ್ಯದ, ಮುಖ್ಯವಾಗಿ ಬೆಂಗಳೂರಿನ, ಚರಿತ್ರೆ ಲಭ್ಯವಾಗುತ್ತದೆ. ಇದು ಸಾಮಾನ್ಯವಾಗಿ ನಾವು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಓದುವಂತಹ ಚರಿತ್ರೆಯಲ್ಲ. ರಾಜಕೀಯ ಆಗುಹೋಗುಗಳ ಕಥೆಯಲ್ಲ, ರಾಜಕೀಯವಾಗಿ ಪ್ರಮುಖರಾದವರ ಏಳುಬೀಳುಗಳ ಕಥೆಯಲ್ಲ. ಇದು ಈ ಭಾಗದ ಜನತೆಯ ಕಥೆ, ಇನ್ನೂ ನಿಷ್ಕೃಷ್ಟವಾಗಿ ಹೇಳುವುದಾದರೆ, ಈ ಜನತೆಯ ಚಿಂತನೆಯನ್ನೂ ಜೀವನರೀತಿಯನ್ನೂ ನಡೆಸಿದ ಸತ್ಯದ ದರ್ಶನ, ಮೌಲ್ಯಗಳ ದರ್ಶನ.

ಮೊದಲಿಯಾರರು ಊಟಕ್ಕೆ ಸೋಮೇಶ್ವರಸ್ವಾಮಿಯ ಗುಡಿಗೆ ಹೋಗುವರು. ಒಂದು ಬಾರಿ ಅವರಿಗೆ ಡಿ.ವಿ.ಜಿ. "ಅಷ್ಟು ದೂರ ಏಕೆ ಹೋಗಬೇಕು? ಬೇಕಾದರೆ ಅಲ್ಲೇ ಒಂದು ಕೋಣೆಯನ್ನು ಬಿಡುವು ಮಾಡಿಸಬಹುದು" ಎಂದರು. ಮೊದಲಿಯಾರರು "ಅದು ಬೇಡ ಸ್ವಾಮಿ. ನಾನು ಸ್ವಾಮಿಯ ಗುಡಿಯ ಹತ್ತಿರ ಹೋಗುತ್ತೇನೆ. ಅದೇನು ದೂರವಲ್ಲ, ಅಲ್ಲಿ ಕೊಳದಲ್ಲಿ ನೀರಿದೆ; ಸುತ್ತಮುತ್ತ ದೊಡ್ಡ ದೊಡ್ಡ ಮರಗಳಿವೆ; ಹೂಗಿಡಗಳಿವೆ. ಅಲ್ಲಿ ನೆರಳಿನಲ್ಲಿ ತಂಪಾಗಿ ಕುಳಿತು, ಒಂದು ಕ್ಷಣ ಶಿವಭಿಕ್ಷೆಯನ್ನು ಊಟಮಾಡುತ್ತೇನೆ. ಕೊಂಚ ಹೊತ್ತು ಶಾಂತವಾಗಿ ಕುಳಿತಿದ್ದು ಇಲ್ಲಿಗೆ ಬರಬಹುದು" ಎಂದರು.

ಭಗವಂತನಿಗೆ ಸಮರ್ಪಿಸಿದ ಬಾಳನ್ನು ಬಾಳಿ ಮನಶ್ಶಾಂತಿ ಕಂಡವರು ಶಿವಪಿಚ್ಚೆ ಮೊದಲಿಯಾರರು. 'ವೈದಿಕ ಧರ್ಮ ಸಂಪ್ರದಾಯಸ್ಥರು'ವಿನಲ್ಲಿ ಮೊದಲ ಮಾತಿನಲ್ಲಿ ಡಿ.ವಿ.ಜಿ. ಹೇಳುತ್ತಾರೆ: "ಬಡತನದಲ್ಲಿ ಭಾಗ್ಯವಂತಿಕೆಯನ್ನು ಅನುಭವಿಸುತ್ತಿದ್ದುದು ಆ ಸಮಾಜಭಾಗದ ಮುಖ್ಯ ಲಕ್ಷಣ. ಆ ಭಾಗ್ಯ ಬ್ಯಾಂಕುಗಳ ಲೆಕ್ಕಕ್ಕೆ ಸಿಕ್ಕುವುದಲ್ಲ. ಧನಕನಕಗಳನ್ನು ಎಣಿಸಲೊಲ್ಲದ್ದು ಆ ಶ್ರೀಮಂತಿಕೆ. ಅದು ಅಂತರಾತ್ಮದ ಶ್ರೀಮಂತಿಕೆ. ಒಳಸಂಪತ್ತಿನ ನೆಮ್ಮದಿಯಲ್ಲಿ ಹೊರಸಂಪತ್ತಿನ ಕೊರತೆಯನ್ನು ಮರೆತಿದ್ದರು ಆ ಜನ."[5]

ಶಿವಪಿಚ್ಚೆ ಮೊದಲಿಯಾರರಿಂದ ಹಿಡಿದು ಸರ್ ಎಂ.ವಿ.ವರೆಗೆ ಈ ಎಲ್ಲ ಶುದ್ಧಚೇತನರಿಗೆ ಶಕ್ತಿ ಕೊಟ್ಟ ಸಂಸ್ಕೃತಿ ಒಂದೇ. ಇದು ಜನತೆಯ ಸಂಸ್ಕೃತಿ.

ಆಧುನಿಕಪೂರ್ವ ಸಾಹಿತ್ಯಕ್ಕೂ ಆಧುನಿಕ ಸಾಹಿತ್ಯಕ್ಕೂ ಇರುವ ಒಂದು

ಮುಖ್ಯ ವ್ಯತ್ಯಾಸ ಎಂದರೆ, ಆಧುನಿಕರಿಗೆ ಮನುಷ್ಯ ಸ್ವಭಾವದಲ್ಲಿರುವ ಆಸಕ್ತಿ. ಒಳ್ಳೆಯವರು, ಕೆಟ್ಟವರು ಎನ್ನುವ ತೀರ್ಮಾನಕ್ಕೆ ಹೋಗದೆ, ತೀರ್ಪು ಕೊಡುವ ಪ್ರವೃತ್ತಿಯನ್ನು ಬದಿಗಿಟ್ಟು ಮನುಷ್ಯ ಸ್ವಭಾವದ ವೈವಿಧ್ಯ ವೈಚಿತ್ರ್ಯಗಳಲ್ಲಿ ಖುಷಿಪಡುವ ಇಂಗ್ಲಿಷ್ ಬರಹಗಾರರು ಎಷ್ಟೋ ಮಂದಿಛಾಸರ್, ಷೇಕ್ಸ್‌ಪಿಯರ್, ಅಡಿಸನ್, ಗೋಲ್ಡ್‌ಸ್ಮಿತ್, ಜೇನ್ ಆಸ್ಟಿನ್, ಚಾರ್ಲ್ಸ್ ಡಿಕನ್ಸ್, ಬರ್ನಾರ್ಡ್ ಷಾ ಎಲ್ಲ ಈ ಮನೋಧರ್ಮದ ನಿರೂಪಣಕಾರರೇ. (ಹೀಗೆಂದರೆ, ಅವರು ಒಳಿತುಕೆಡುಕುಗಳ ವ್ಯತ್ಯಾಸವನ್ನು ಕಡೆಗಣಿಸುತ್ತಾರೆ ಎಂದಲ್ಲ.) ನಮ್ಮಲ್ಲಿ ಕುಮಾರವ್ಯಾಸನಲ್ಲಿ ಈ ಮನೋಧರ್ಮ ಕಾಣುತ್ತದೆ. ನವೋದಯ ಸಾಹಿತ್ಯದಲ್ಲಿ ಈ ಮನೋಧರ್ಮ ಕಾಣುತ್ತದೆ.

ಇದರ ಸೊಗಸಾದ ಅಭಿವ್ಯಕ್ತಿ 'ಜ್ಞಾಪಕ ಚಿತ್ರಶಾಲೆ'. ಡಿ.ವಿ.ಜಿ. ಒಂದು ಜಗತ್ತನ್ನೇ ಸೃಷ್ಟಿಸಿದ್ದಾರೆ. ಅವರ ಈ ಮಾಲೆಯ ಕೇಂದ್ರ ಉದ್ದೇಶ ಹಿರಿಮೆಯ ದರ್ಶನ, ಸಂಸ್ಕೃತಿಯ ದರ್ಶನ, ಪರಿಪಕ್ವ ಮನಸ್ಸಿನವರು ಹೇಗೆ ನಡೆದುಕೊಳ್ಳುತ್ತಾರೆ ಎಂದು ಚಿತ್ರಿಸುವುದು. ಆದರೆ ಕೃತಿ ಇದಿಷ್ಟನ್ನೇ ಸಾಧಿಸಿದ್ದರೆ, ಇಲ್ಲಿನ ವ್ಯಕ್ತಿಗಳು ಉದಾಹರಣೆಗಳಷ್ಟೇ ಆಗುತ್ತಿದ್ದರಲ್ಲದೆ, ಜೀವಂತ ಮನುಷ್ಯರಾಗುತ್ತಿರಲಿಲ್ಲ. ಡಿ.ವಿ. ಜಿ.ಯ ಹಾಸ್ಯಪ್ರಜ್ಞೆ ನವಿರಾದುದು. ಅವರ ನಗೆ ನಿರ್ಮಲ ಮನಸ್ಸಿನಿಂದ ಬರುವುದು. ಇತರರನ್ನು ಕಂಡು ನಗುವಂತೆಯೇ ತಮ್ಮನ್ನು ಕಂಡೂ ನಗಬಲ್ಲರು. ಯಾವ ವ್ಯಕ್ತಿಯ ಅಥವಾ ಸನ್ನಿವೇಶದ ವಿನೋದದ ಮುಖವನ್ನು ಗುರುತಿಸಬಲ್ಲರು. ಸಂಸ್ಕೃತಿಯ ದರ್ಶನವಾದ ಈ ಮಾಲೆ ಅತಿಗಂಭೀರವಾಗಿ ಮಂಕಾಗದಿರುವುದಕ್ಕೆ ಇದೂ ಒಂದು ಕಾರಣ. ಮಾನವ ಸ್ವಭಾವದಲ್ಲೇ ಡಿ.ವಿ.ಜಿ. ಅವರಿಗಿರುವ ಆಸಕ್ತಿಯಿಂದಾಗಿ ಅವರು ಚಿತ್ರಿಸುವ ವ್ಯಕ್ತಿಗಳು ಜೀವಂತರಾಗುತ್ತಾರೆ. ಎಂ. ಜಿ. ವರದಾಚಾರ್ಯರು ವಕೀಲರು; ಆದರೆ ತುರ್ತಾಗಿ ಮೊಕದ್ದಮೆಗೆ ಸಿದ್ಧಮಾಡಿಕೊಳ್ಳುವುದನ್ನು ಬಿಟ್ಟು ಕಾವ್ಯ ವ್ಯಾಸಂಗದಲ್ಲಿ ರಾತ್ರಿ ಕಳೆಯುವರು. ಎಚ್. ವಿ. ನಂಜುಂಡಯ್ಯನವರು ಸಾತ್ವಿಕರು, ಕರುಣಾಳುಗಳು. ಒಂದು ಬಾರಿ ದೆಹಲಿಗೆ ಪ್ರಯಾಣ ಮಾಡುವಾಗ ಗೋದಾವರಿ ಸ್ನಾನ ಮಾಡಬೇಕೆಂದು ತೋರಿತು. ಬೆಳಗ್ಗೆ ಐದು ಗಂಟೆಗೆ ರೈಲು ನಾಸಿಕದ ಬಳಿ ಬಂದಾಗ ಅವರ ಕಾರ್ಯದರ್ಶಿ ಎಚ್ಚರಿಕೆ ಕೊಟ್ಟ. ಅವರು, “ಏನಯ್ಯ ಇಷ್ಟು ಚಳಿ? ಈಗ ರೈಲಿನಿಂದ ಇಳಿದರೆ ದೇವರಿಗೆ ಆಗುವುದು ಶಾಪ ಅಷ್ಟೇ. ದೆಹಲಿಯಲ್ಲಿ ಮಾಡೋ ಪಾಪಗಳನ್ನ ಮಾಡಿ ವಾಪಸ್ ಬರುವಾಗ ಸ್ನಾನ ಮಾಡೋಣ” ಎಂದರು. ವಾಪಸ್ ಬರುವಾಗ ನಾಸಿಕದ ಬಳಿ ಎಬ್ಬಿಸಿದಾಗ, “ಅಂಥ ಪಾಪವನ್ನೇನೂ ಮಾಡಲಿಲ್ಲವಲ್ಲ! ಈ ರಾತ್ರಿ ಇಲ್ಲಿ ಏಕೆ ಕೊರಗುವುದು!” ಎಂದು ಬಿಟ್ಟರು. ಸಿ. ರಂಗಾಚಾರ್ಯರು ಪ್ರತಿಭಾವಂತ ದಿವಾನರು. 'ಇಂಡಿಯ ದೇಶದಲ್ಲೆಲ್ಲ ಮೊಟ್ಟಮೊದಲನೆಯ ಪ್ರಜಾರಾಜ್ಯವಾದಿ' ಎನ್ನುತ್ತಾರೆ ಡಿ.ವಿ.ಜಿ. ಅವರು. ಆದರೆ, “ಅವರಿಗೆ ಯಾವಾಗಲೂ ಅವಸರ. ಕೋಟನ್ನು

ದಗಲೆ ದಗಲೆಯಾಗಿ ಹಾಕುವರು. ಕೋಟಿನ ಗುಂಡಿಯನ್ನು ಹೆಚ್ಚು ಕಡಿಮೆ ಹಾಕಿಬಿಡುವುದು ಅಪರೂಪವಲ್ಲ. ರುಮಾಲನ್ನಂತೂ ಕೈಗೆ ಬಂದಂತೆ ಸುತ್ತುವರು.'' ಶೇಷಾದ್ರಿ ಅಯ್ಯರ್ ಅತ್ಯಂತ ಪ್ರತಿಭಾವಂತರು, ಕಾರ್ಯಸಮರ್ಥರು. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸಭಿಕರ ಬಾಯಿ ಮುಚ್ಚಿಸಿದ ರೀತಿಯನ್ನು ಕಂಡು ಬ್ರಿಟಿಷ್ ರೆಸಿಡೆಂಟ್ ಲೀವಾರರ್ ಅವರನ್ನು ಅಭಿನಂದಿಸಿ, ``ನೀವು ಸಭೆಯನ್ನು ನಡೆಸಿದ್ದು ಬಹಳ ಚೆನ್ನಾಗಿದೆ. ತಲೆಹರಟೆ ಹರಟುವ ಸಭಿಕರನ್ನು ಹಾಗೆ ಬಾಯಿ ಮುಚ್ಚಿಸಿ ಅದುಮಬೇಕು'' ಎಂದು ಬರೆದ. ಶೇಷಾದ್ರಿ ಅಯ್ಯರ್ ಸಂಭ್ರಮದಿಂದ ತಮ್ಮ ಸಹೋದ್ಯೋಗಿ ಚಂಚಲರಾಯರಿಗೆ ಕಾಗದವನ್ನು ತೋರಿಸಿದರು. ಅವರು, ``ಈ ಕಾಗದದಿಂದ ನೀವು ನಾಚಿಕೆಪಟ್ಟುಕೊಳ್ಳಬೇಕು'' ಎಂದು ಹೇಳಿ, ಬ್ರಿಟಿಷ್ ಅಧಿಕಾರ ಸ್ಥಾಪನೆಯಾಗಬೇಕೆಂಬ ಹಂಬಲದ ಆತ ಹಾಗೆ ಬರೆದ, ಆದರೆ ಶೇಷಾದ್ರಿ ಅಯ್ಯರ್ ನಡೆದುಕೊಂಡ ರೀತಿ ತಪ್ಪು ಎಂದರು. ಆಗ ಶೇಷಾದ್ರಿ ಅಯ್ಯರಿಗೆ ತಮ್ಮ ಧೋರಣೆಯ ಅಸಂಗತತೆ ಅರ್ಥವಾಯಿತು. ಚಂಚಲರಾಯರ ಹಿತವಚನದಂತೆ, ಮರುದಿನ ಸಭೆಯ ಕ್ಷಮೆ ಬೇಡಿದರು. ಪಿ. ಎಸ್. ಶಿವಸ್ವಾಮಿ ಅಯ್ಯರ್ ``ಯಾರನ್ನಾದರೂ ತಮ್ಮ ಮನೆಗೆ ಅತಿಥಿಯಾಗಬೇಕೆಂದು ಕರೆದರೆ, ಆ ಅತಿಥಿ ರೈಲಿನಿಂದ ಇಳಿದ ಘಳಿಗೆಯಿಂದ ಮತ್ತೆ ರೈಲು ಹತ್ತುವವರೆಗೆ ಆತನ ಎಲ್ಲ ಉಪಚಾರ ವ್ಯವಸ್ಥೆಗಳೂ ಶಿವಸ್ವಾಮಿ ಅಯ್ಯರ್ ಅವರ ಜವಾಬ್ದಾರಿ. ಅತಿಥಿ ಕೂಡುವ ಕೋಣೆಯಲ್ಲಿ ಆತನ ಉಪಯೋಗಕ್ಕಾಗಿ ಸ್ಟಾಂಪ್ ಅಂಟಿಸಿದ ಕವರುಗಳೂ ಕಾರ್ಡುಗಳೂ ಇರುತ್ತಿದ್ದವು. ಟವಲು, ಸೋಪು ಎಲ್ಲವೂ ಸಿದ್ಧವಾಗಿರುತ್ತಿದ್ದವು. ಅತಿಥಿ ಯಾವುದಕ್ಕೂ ಒದ್ದಾಡಬಾರದು. ಒಂದು ಕಾರು ಆತನ ಉಪಯೋಗಕ್ಕಾಗಿ ಇರುತ್ತಿತ್ತು... ಅತಿಥಿಯು ಏನನ್ನಾದರೂ ಕೊಂಡರೆ ಗುಮಾಸ್ತನು ಅದನ್ನು ಗುರುತು ಮಾಡಿಕೊಂಡು ಮನೆಗೆ ಹೋದ ಬಳಿಕ ಯಜಮಾನರಿಗೆ ತಿಳಿಸಬೇಕು. ಆ ಬಿಲ್ಲುಗಳನ್ನು ಶಿವಸ್ವಾಮಿ ಅಯ್ಯರ್ ಕೊಡುತ್ತಿದ್ದರು.'' ``ಅವರು ತಮ್ಮ ಪುಸ್ತಕವನ್ನು ಯಾರಿಗಾದರೂ ಎರವಲು ಕೊಡುವಾಗ ಷರತ್ತುಗಳು: (1) ನೀನು ಪುಸ್ತಕವನ್ನು ಬೇರೆ ಯಾರಿಗೂ ಎರವಲು ಕೊಡಕೂಡದು; ನನಗೇ ವಾಪಸ್ ಕೊಡಬೇಕು. (2) ಪುಸ್ತಕವನ್ನು ತುಂಬ ಅಗಲವಾಗಿ ತೆರೆಯಕೂಡದು. (3) ತೆರೆದ ಮೇಲೆ ಮುಚ್ಚುವುದಕ್ಕೆ ಮುಂಚೆ ಹಾಳೆಗಳ ಮೇಲೆ ಕುಳಿತಿರುವ ಧೂಳನ್ನು ಬಟ್ಟೆಯಿಂದ ಒರೆಸಬೇಕು. (4) ಪುಸ್ತಕದ ಮಾರ್ಜಿನ್‌ಗಳಲ್ಲಾಗಲಿ ಬೇರೆ ಭಾಗದಲ್ಲಾಗಲಿ ಗುರುತುಗಳನ್ನು ಮಾಡಕೂಡದು.''

ಹೀಗೆ ಡಿ.ವಿ.ಜಿ. ತಾವು ಮೆಚ್ಚಿಕೊಂಡ ಜನರ ಒಳ್ಳೆಯ ಗುಣಗಳನ್ನು ಪಟ್ಟಿ ಮಾಡಿ ಉದಾಹರಣೆ ಕೊಡುವುದರಲ್ಲಿ ಆಸಕ್ತರಾದವರಲ್ಲ. ಸಮಗ್ರ ವ್ಯಕ್ತಿತ್ವದಲ್ಲಿ ಅವರ ಆಸಕ್ತಿ. ತಾವು ಚಿತ್ರಿಸುವ ವ್ಯಕ್ತಿಯ ದೌರ್ಬಲ್ಯಗಳನ್ನೂ, ವೈಚಿತ್ರ್ಯಗಳನ್ನೂ ಸ್ಪಷ್ಟವಾಗಿ ಗುರುತಿಸುತ್ತಾರೆ. ತಮ್ಮ ಮೆಚ್ಚಿನ ಡಾಕ್ಟರ್ ಅಚ್ಯುತರಾಯರಾಗಲಿ ಬೇರೆಯವರಾಗಲಿ

ಆಡುವ ಅಶ್ಲೀಲ ಎನ್ನಿಸಬಹುದಾದ ಮಾತುಗಳನ್ನೂ ಸೂಚಿಸುತ್ತಾರೆ. ಸಮಗ್ರ ವ್ಯಕ್ತಿತ್ವ ಇತರರಿಗೆ ಹೇಗೆ ಕಾಣುತ್ತಿತ್ತು, ಅವರ ಮೇಲೆ ಯಾವ ಪ್ರಭಾವವನ್ನು ಬೀರುತ್ತಿತ್ತು ಎನ್ನುವುದನ್ನು ನಮ್ಮ ಅನುಭವಕ್ಕೆ ತಂದುಕೊಡುತ್ತಾರೆ.

ಡಿ.ವಿ.ಜಿ. ಅವರ 'ಜ್ಞಾಪಕ ಚಿತ್ರಶಾಲೆ' ಒಳ್ಳೆಯ ಗುಣಗಳುಕೆಟ್ಟಗುಣಗಳನ್ನು ಬೇರಳಿಟ್ಟು ತೋರಿಸುವ ಕೃತಿಯಲ್ಲ, ಜೀವನವನ್ನು ಗಂಭೀರವಾಗಿ ತೆಗೆದುಕೊಂಡು ಎತ್ತರಕ್ಕೆ ಬೆಳೆದ ಚೇತನಗಳ ತವರು. ಶಿವಪಿಚ್ಚೆ ಮೊದಲಿಯಾರರಿಂದ ಸರ್ ಎಂ. ವಿಶ್ವೇಶ್ವರಯ್ಯನವರವರೆಗೆ ಸಾಮಾನ್ಯವಾಗಿ ಇವರೆಲ್ಲ ತಮ್ಮ ಕೆಲಸವನ್ನು (ಅದು ಲೋಕದ ಕಣ್ಣಿನಲ್ಲಿ ಅಮುಖ್ಯವಾಗಿರಲಿ, ಮುಖ್ಯವಾಗಿರಲಿ) ನಿಷ್ಠೆಯಿಂದ ಮಾಡಿದವರು, ಆತ್ಮಗೌರವ ಅಹಂಕಾರ ಇವುಗಳ ನಡುವಿನ ಗೆರೆಯನ್ನು ಗುರುತಿಸಿ ಆ ಗೆರೆಯ ಮೇಲೆಯೇ ನಡೆದವರು. ಇವರು ಯಾವುದೇ ಕ್ಷೇತ್ರದವರಾಗಿರಬಹುದು, ಸಾಮಾಜಿಕ ಸ್ತರದವರಾಗಿರಬಹುದು, ತಮ್ಮ ಕಾರ್ಯದಲ್ಲಿ ಗೌರವವನ್ನಿಟ್ಟುಕೊಂಡು ನಿಷ್ಠೆಯಿಂದ ಬಾಳಿದವರು. ಹೃದಯವಂತಿಕೆಯವರು, ಸರ್ ಎಂ.ವಿ., ಎಂ. ವೆಂಕಟಕೃಷ್ಣಯ್ಯನವರು, ಕೆ.ಸಿ. ಪುಟ್ಟಣ್ಣಶೆಟ್ಟರು ಮೊದಲಾದವರ ಹಿರಿಮೆಯನ್ನು ಕನ್ನಡಿಗರೆಲ್ಲ ಬಲ್ಲರು. ಅಷ್ಟು ಪ್ರಸಿದ್ಧರಲ್ಲದವರ ಹಿರಿಮೆಯೂ ಕಡಿಮೆಯಲ್ಲ. ಇಲ್ಲಿ ಪಾಠ ಹೇಳುವ ಒಬ್ಬ ವಿದ್ವಾಂಸ ಶ್ರೇಷ್ಠರಾಗಿದ್ದ ವಿರೂಪಾಕ್ಷ ಶಾಸ್ತ್ರಿಗಳಿಗೆ ಅಚ್ಚಿನ ಪುಸ್ತಕಗಳಲ್ಲಿ ಗೌರವ ಕಡಿಮೆ. ಆದರೆ ಒಂದು ಪ್ರಸಂಗ ಸ್ಮರಣಾರ್ಹ. ಡಿ.ವಿ.ಜಿ. ಅವರೂ ಇತರ ಹಲವರೂ ಅವರ ಬಳಿಗೆ ಪಾಠಕ್ಕೆ ಹೋಗುತ್ತಿದ್ದರು. ಒಂದು ದಿನ ಡಿ.ವಿ.ಜಿ. ಕೈಯಲ್ಲಿದ್ದ ಪುಸ್ತಕವನ್ನು ನೆಲದ ಮೇಲಿಟ್ಟರು. ವಿದ್ವಾಂಸರು ಹೇಳುತ್ತಿದ್ದ ವಾಕ್ಯ ಅರ್ಧಕ್ಕೇ ನಿಂತಿತು. ಅವರು ಹೇಳಿದರು, “ಪುಸ್ತಕವನ್ನು ಕೈಯಲ್ಲಿ ತೆಗೆದುಕೊಳ್ಳೋಣವಾಗಲಿ. ನಾಳೆಯಿಂದ ವ್ಯಾಸಪೀಠ ಇಡೋಣವಾಗುತ್ತದೆ, ಪುಸ್ತಕವನ್ನು ಅದರ ಮೇಲೆ ಇಡಬಹುದು. ಪುಸ್ತಕವನ್ನು ನೆಲದ ಮೇಲೆ ಇಟ್ಟರೆ ಪಾಠ ನಿಂತುಹೋಗುತ್ತದೆ.” ಇಲ್ಲಿನ ಒಬ್ಬ ಮಂಡಿ ಹರಿಯಣ್ಣ, ಒಬ್ಬ ಆರ್ಮುಗಂ ಮೊದಲಿಯಾರ್ ಯಾವ ಸಮಾಜಕ್ಕೂ ಭೂಷಣರು. ಒಬ್ಬ ಮಂಡಿಹರಿಯಣ್ಣನವರ ಮಾತನ್ನು ಇಡೀ ಪೇಟೆಯ ವರ್ತಕರು ಗೌರವದಿಂದ ಕೇಳುತ್ತಿದ್ದುದು ಅವರಿಗೆ ಅಧಿಕಾರವಿತ್ತೆಂದಲ್ಲ, ಅವರ ಔದಾರ್ಯದಿಂದ, ಅವರ ನೈತಿಕ ಹಿರಿಮೆಯಿಂದ, ಅವರ ಆದರ್ಶಬಾಯಿಮಾತಿನ ಆದರ್ಶವಲ್ಲ, ಕಾರ್ಯಗತವಾದ ಆದರ್ಶಯುದ್ಧ ಕಾಲದಲ್ಲಿ ಅನುಚಿತವಾದ ರೀತಿಯಲ್ಲಿ ಲಾಭಮಾಡುವುದಿಲ್ಲ ಎಂಬ ನಿರ್ಧಾರದಲ್ಲಿ ಪ್ರಕಟವಾಯಿತು. ಹಾಗೆಂದು ಇತರರಿಗಿಂತ ತಾವು ಶ್ರೇಷ್ಠ ಎಂಬ ಭಾವನೆ ಅವರದಲ್ಲ. ಅವರ ಮಾತು ಇದು: “ನನಗೆ ದೇವರು ಕೊಟ್ಟಿರುವುದು ಸಾಕು, ಸ್ವಾಮಿ. ನಮ್ಮ ಹಿರಿಯರು ಹಾಕಿದ ನಿಯಮಗಳನ್ನು ನಾವು ಬಿಡುವುದಕ್ಕಾಗುವುದಿಲ್ಲ. ಅಷ್ಟರಲ್ಲಿ ಎಷ್ಟು ಲಾಭ ಬಂದರೆ ಅಷ್ಟು ಸಾಕು. ಬೇರೆಯ ಜನ ಅವರ ದಾರಿಯಲ್ಲಿ ವ್ಯಾಪಾರ ಮಾಡಿಕೊಂಡು ಸಂಪಾದಿಸಿಕೊಳ್ಳಲಿ. ಅವರವರ

ಧರ್ಮ ಅವರದು.'' ಇಲ್ಲಿನ ಹಿರಿಯರು ಬಯಸಿದ್ದು ಪ್ರಾಪಂಚಿಕ ಸಂಪತ್ತಲ್ಲ, (ಹಾಗೆಂದು ಅವರೆಲ್ಲ ವಿರಕ್ತರು ಎಂದಲ್ಲ) ನೈತಿಕ ಸಂಪತ್ತನ್ನು, ಸಂತೋಷದ ಸಂಪತ್ತನ್ನು. ಹೆಚ್ಚು ಜನ ಹೆಸರು ಕೇಳಿರದ ಒಬ್ಬ ವ್ಯಕ್ತಿ ಇದರಲ್ಲಿ ಬಹುಮಂದಿಯ ದೃಷ್ಟಿಯನ್ನು ಪ್ರತಿನಿಧಿಸುತ್ತಾರೆ. ನರಸಿಂಹಮೂರ್ತಿ ಎಂಬ ವಿದ್ವಾಂಸರು, ಸಜ್ಜನರು, ಬೆಂಗಳೂರಿನಲ್ಲಿದ್ದವರು. ಪ್ರತಿ ಸಂಜೆಯನ್ನೂ ವರದಾಚಾರ್ಯರು, ಭೀಮರಾಯರು, ಡಿ.ವಿ.ಜಿ. ಮೊದಲಾದ ವಿವೇಚನೆಯುಳ್ಳ, ವಿದ್ವತ್ತುಳ್ಳ ಸ್ನೇಹಿತರೊಡನೆ ಕಳೆಯುವರು. ಅವರ ಕೆಲವರು ಸ್ನೇಹಿತರು ಅವರಿಗೆ ದೊಡ್ಡ ಕೆಲಸ ಕೊಡಿಸಲು ಪ್ರಯತ್ನಿಸಿದರು. ಅವರು ಈ ಕೆಲಸವಾದರೆ ಮಡಿಕೇರಿಗೋ ಬಳ್ಳಾರಿಗೋ ಹೋಗಬೇಕಾಗುತ್ತಿತ್ತು. ಅವರು ಕೆಲಸ ಬೇಡ ಎಂದರು. ಇದೇನು ಹುಚ್ಚು ಎಂದು ಸ್ನೇಹಿತರು ಪ್ರಶ್ನಿಸಿದರೆ ಅವರ ಉತ್ತರ:''ಬಳ್ಳಾರಿಯಲ್ಲಿ, ಮಡಿಕೇರಿಯಲ್ಲಿ ವರದಾಚಾರ್ಯರು ಸಿಕ್ಕುತ್ತಾರೆಯೇ? ಗುಂಡಪ್ಪ? ಭೀಮರಾಯರು? ಇವರ ಸ್ನೇಹ, ಇವರ ವಾಗ್ವಾದ ಇವೇ ನನಗೆ ಸಂತೋಷ.'' ಬಾಳಿನಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಬೆಲೆ ಎಂದು ತಿಳಿದ ವಿವೇಕಯುತ ಮನಸ್ಸು ಇದು.

'ಜ್ಞಾಪಕ ಚಿತ್ರಶಾಲೆ'ಯಲ್ಲಿ ಒಂದೆರಡು ಮಿತಿಗಳು ಕಾಣಬಹುದು. ಇಲ್ಲಿನ ಸಾಮಾಜಿಕ ಆವರಣ ಮೂರ್ತವಾಗುತ್ತದೆ ಎನ್ನುವ ಮಾತನ್ನು ಆಗಲೇ ಹೇಳಿದೆ. ಆದರೆ ಈ ಸಮಾಜದ ವಿಶ್ಲೇಷಣೆ, ಸಾಮಾಜಿಕ ಬದಲಾವಣೆಗಳಿಗೆ ಕಾರಣಗಳ ವಿಶ್ಲೇಷಣೆ ಇವು ಹೆಚ್ಚಾಗಿ ದೊರೆಯುವುದಿಲ್ಲ. ಸಾಮಾಜಿಕ ಬದಲಾವಣೆಗಳಿಗೆ ಚಾಲನೆ ಕೊಡುವ ಶಕ್ತಿಗಳು ಯಾವುವು? ಇವನ್ನು ಚುರುಕುಗೊಳಿಸುವುದು ಹೇಗೆ? ಇಂತಹ ಪ್ರಶ್ನೆಗಳು ಇಲ್ಲಿ ಪ್ರವೇಶಿಸುವುದಿಲ್ಲ. ಇಲ್ಲಿ ಗಮನವೆಲ್ಲ ವ್ಯಕ್ತಿಯ ವಿಕಸನ, ಪರಿಪಕ್ವತೆ ಇವುಗಳ ಮೇಲೆ. ಎರಡನೆಯದಾಗಿ, ವ್ಯಕ್ತಿಯ ಜೀವನದಲ್ಲೂ ದುಷ್ಟತನದ ಸಮಸ್ಯೆ ಇಲ್ಲಿ ಹೆಚ್ಚಾಗಿ ಸುಳಿಯುವುದಿಲ್ಲ. ದುಷ್ಟತನದಿಂದ ದೂರವಿರಬೇಕೆಂದರೂ ದುಷ್ಟತನ ದೂರ ನಿಲ್ಲುವುದಿಲ್ಲ. ಪರ್ಣಕುಟಿಯಲ್ಲಿರುವ ಸೀತೆಯನ್ನು ಅರಸಿಕೊಂಡು ಬರುತ್ತಾನೆ ರಾವಣ, ಗೋಕುಲದಲ್ಲಿರುವ ಕೃಷ್ಣನಿಗೆ ಕಂಸ ಬರ ಹೇಳುತ್ತಾನೆ. ಬಾಳಿನಲ್ಲಿ ದುಷ್ಟತನದೊಂದಿಗೆ ವ್ಯವಹರಿಸುವುದು ಹೇಗೆ? ಈ ಸಮಸ್ಯೆಯಾದರೂ 'ಜ್ಞಾಪಕ ಚಿತ್ರಶಾಲೆ'ಯ ಜಗತ್ತಿನಲ್ಲಿ ಮುಖ್ಯವಾಗುವುದಿಲ್ಲ. ಆದರೆ ಪ್ರತಿಕೃತಿಯಲ್ಲಿ ಎಲ್ಲವನ್ನೂ ನಿರೀಕ್ಷಿಸಲಾಗುವುದಿಲ್ಲ. 'ಜ್ಞಾಪಕ ಚಿತ್ರಶಾಲೆ' ಒಂದು ಅಪೂರ್ವ, ಶ್ರೀಮಂತ ಸೃಷ್ಟಿ.

ಈ ಮೇಲಿನ ವಿಷಯ ನಿರೂಪಣೆಯು ಡಿ.ವಿ.ಜಿ.ಯವರ ಚಿಂತನೆಯ ಮೂಲಕ ಮೂಡಿಬಂದ ವಿಚಾರಗಳು ಇಂದಿನ ಪ್ರಸ್ತುತ ದಿನಗಳಲ್ಲಿ ಹೇಗೆ ಒಪ್ಪಿತ ಮೌಲ್ಯಗಳಾಗಬಲ್ಲವು ಹಾಗೂ ಸಾಮಾಜಿಕ ನೆಲೆಯಲ್ಲಿ ವ್ಯಕ್ತಿಗಳ ಜೀವನ ಮೌಲ್ಯವಾಗಿ ಉಳಿಯಬೇಕಾದರೆ ಡಿ.ವಿ.ಜಿ.ಯವರ ಅಂದಿನ ಕಾಲಘಟ್ಟದ ಪರಿಸರದ ತಿಳುವಳಿಕೆ ಅಗತ್ಯವಿದೆ. ಯಾವುದೇ ಕಾಲಕ್ಕೂ ಒಪ್ಪಿತವಾದ ಸಂಗತಿ/ನಂಬಿಕೆ ಇಂದಿಗೂ

ಪ್ರಸ್ತುತವಾಗಬೇಕೆಂದೇನಿಲ್ಲ. ಇಲ್ಲಿರುವ ವೈಚಾರಿಕ ದೃಷ್ಟಿಕೋನ ಅಗತ್ಯ ಕುರಿತು ಚಿಂತಿಸುವ ಸಮಕಾಲೀನ ಚಿಂತನೆಗಳು ಅಗತ್ಯವಿದೆ.

**ಕೊನೆ ಟಿಪ್ಪಣಿಗಳು:**

1. ನಾಯಕ ಹಾ.ಮಾ. (ಸಂ), (2013), ಡಿ.ವಿ.ಜಿ. ಕೃತಿಶ್ರೇಣಿ: ಸಂಪುಟ–6, ನೆನಪಿನ ಚಿತ್ರಗಳು, ಜ್ಞಾಪಕ ಚಿತ್ರಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.ಸಂ. 17
2. ಅದೇ, ಪು.ಸಂ. 18
3. ಅದೇ, ಪು.ಸಂ. 106
4. ಅದೇ, ಪು.ಸಂ. 19
5. ಅದೇ, ಪು.ಸಂ. 106

**ಪರಾಮರ್ಶನ ಗ್ರಂಥಗಳು:**


1. ತಿಪ್ಪೇರುದ್ರಸ್ವಾಮಿ ಎಚ್., (2011), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.
2. ನಾಯಕ ಹಾ.ಮಾ. (ಸಂ), (2013), ಡಿ.ವಿ.ಜಿ. ಕೃತಿಶ್ರೇಣಿ: ಸಂಪುಟ–6, ನೆನಪಿನ ಚಿತ್ರಗಳು, ಜ್ಞಾಪಕ ಚಿತ್ರಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.